ಎಕ್ಸ್‌ಟೆನ್ಸ್‌ನ್‌ನಲ್ಲಿ, ಪ್ರತಿಯೊಂದು ಸ್ಟ್ರೀಟ್‌ನಲ್ಲಿ ಈಗಿನ ಮಾರ್ಕೆಟ್ ಬೆಲೆ ಏನಿದೆ ಎನ್ನುವುದನ್ನು ವ್ಯಾಲ್ಯು ಮಾಡಿ ನಾವು ಗೈಡ್‌ಲೈನ್ಸ್ ನೀಡುತ್ತಿದ್ದೇವೆ. ಬಹುಶಃ ಇದನ್ನು 8-10 ದಿವಸದಲ್ಲಿ ಫೈನಲೈಸ್ ಮಾಡಿ ಕ್ಯಾಬಿನೆಟ್ ಮುಂದೆ ತರುತ್ತಿದ್ದೇನೆ. ಏನೇನು ಲೀಕೇಜಸ್ ಇದೆ ಅದನ್ನು ಪ್ಲಗ್ ಮಾಡುವುದಕ್ಕೆ ಎಲ್ಲಾ ಕ್ರಮ ಕೈಗೊಳ್ಳುತ್ತಿದ್ದೇವೆ. ಈಗ ಅಂಡರ್ ವ್ಯಾಲ್ಯುಸ್ ಎಲ್ಲೆಲ್ಲಿ ಆಗಿದೆಯೆಂದು ನಮ್ಮ ಗಮನಕ್ಕೆ ಬಂದಿದೆ ಅದನ್ನೆಲ್ಲ ಸೆಕ್ಷನ್ 45ಎ ಅಡಿಯಲ್ಲಿ ಅಂಡರ್ ವ್ಯಾಲ್ಯುಏಷನ್ ಆಫೀಸರ್‌ಗೆ ಕಳುಹಿಸಿ ಅದರ ಮೇಲೆ ಕ್ರಮ ಕೈಗೊಳ್ಳುತ್ತಾ ಇದ್ದೇವೆ.

(ಇ) ಹೆಗ್ಗಡದೇವನಕೋಟೆ ತಾಲ್ಲೂಕು ಮೇಟಿಕುಪ್ಪೆ ಅರಣ್ಯ ಪ್ರದೇಶದಲ್ಲಿ ಮರದ ನಾಟಾಗಳು ಕಳ್ಳ ಸಾಗಾಣಿಕೆ

ಶ್ರೀ ಎನ್. ನಾಗರಾಜು (ಹೆಗ್ಗಡದೇವನಕೋಟೆ ಕ್ಷೇತ್ರ) : ಸ್ಪೀಕರ್ ಸರ್, ನನ್ನ ಕ್ಷೇತ್ರದ ಹೆಗ್ಗಡದೇವನಕೋಟೆ ತಾಲ್ಲೂಕು, ಮೇಟಿಕುಪ್ಪೆ ಅರಣ್ಯ ಪ್ರದೇಶದಲ್ಲಿ ಸುಮಾರು 800 ರಿಂದ 100 ಲಾರಿ ಲೋಡಷ್ಟು ಮರದ ನಾಟಾಗಳು ಕಳ್ಳ ಸಾಗಾಣಿಕೆಯಾಗಿರುವುದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ವನ್ಯಜೀವಿ ವಿಭಾಗ, ಹುಣಸೂರು ಇವರ ಗಮನಕ್ಕೆ ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರ ಬಗ್ಗೆ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ಕೈಕೊಂಡ ಕ್ರಮಗಳೇನು ಹಾಗೂ ಎಷ್ಟು ಮರದ ನಾಟಾಗಳ ಕೇಸನ್ನು ದಾಖಲಿಸಿದ್ದಾರೆ, ಅವುಗಳ ವಿವರ ನೀಡುವುದು; ಇಷ್ಟೊಂದು ದೊಡ್ಡ ಪ್ರಮಾಣದ ಕಳ್ಳ ಸಾಗಾಣಿಕೆಯಾಗುತ್ತಿದ್ದರೂ ಹಿರಿಯ ಅಧಿಕಾರಿಗಳ ಗಮನಕ್ಕೆ ಬಂದಿಲ್ಲವೆ ಹಾಗೂ ಅವರು ಕೈಗೊಂಡ ಕ್ರಮಗಳೇನು? ಸುಮಾರು 30 ರಿಂದ 40 ಲಕ್ಷ ರೂ. ನಷ್ಟವನ್ನು ಸರ್ಕಾರಕ್ಕೆ ಯಾರು ಭರಿಸಬೇಕು? ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಹುಣಸೂರು ಇವರು ಕಾಕನ ಕೋಟೆ ಅರಣ್ಯ ಪ್ರದೇಶದಿಂದ (ಹೆಗ್ಗಡದೇವನ ಕೋಟೆ ತಾಲ್ಲೂಕು) ಮರಗಳನ್ನು ಹುಣಸೂರು ಟಿಂಬರ್ ಡಿಪೋಗೆ ಸಾಗಿಸಲು ಅನುಮತಿಯನ್ನು ಯಾರು ನೀಡಿದ್ದಾರೆ? ಹೆಗ್ಗಡದೇವನಕೋಟೆ ತಾಲ್ಲೂಕು ಎರೆಹಳ್ಳಿಯ ಟಿಂಬರ್ ಡಿಪೋ ಇದ್ದು ಇಲ್ಲಿ ಶೇಖರಿಸಬೇಕಾಗಿದ್ದ ಮರಗಳನ್ನು 66 ಕಿ.ಮಿ. ದೂರದ ಹುಣಸೂರು ಡಿಪೋಗೆ ಸಾಗಿಸಲು ಕಾರಣಗಳೇನು? ಇದರಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟವೆಷ್ಟು? ಹೆಗ್ಗಡೆದೇವನ ಕೋಟೆ ಜನತೆ ಮರಗಳನ್ನು ಖರೀದಿಸಲು ಎಲ್ಲಿಗೆ ಹೋಗಬೇಕು? ಎರೆಹಳ್ಳಿ ಟಿಂಬರ್ ಡಿಪೋನಲ್ಲಿ ಮರದ ನಾಟಾಗಳಿಲ್ಲದೆ ಅಲ್ಲಿನ ಸಿಬ್ಬಂದಿ ವೆಚ್ಚಕ್ಕೆ ಆಗುವ ಖರ್ಚು ಎಷ್ಟು?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಹೆಗ್ಗಡದೇವನಕೋಟೆ ತಾಲ್ಲೂಕು ಮೇಟಿಕುಪ್ಪೆ ಅರಣ್ಯ ಪ್ರದೇಶದಿಂದ ಯಾವುದೇ ಮರದ ಕಳ್ಳ ಸಾಗಾಣಿಕೆ ಆಗಿರುವುದಿಲ್ಲ. ಇಲಾಖೆಯ ಅಧಿಕಾರಿಗಳು ಸಾಕಷ್ಟು ಮುಂಜಾಗ್ರತೆ ಕ್ರಮಗಳನ್ನು ಜರುಗಿಸುತ್ತಿದ್ದು ಕಳ್ಳಸಾಗಾಣಿಕೆ ಮಾಡಲು ಅವಕಾಶವಿರುವುದಿಲ್ಲ. ಆದುದರಿಂದ ಮಾನ್ಯ ಸದಸ್ಯರು ಆರೋಪಿಸಿರುವಂತೆ ಸರ್ಕಾರಕ್ಕೆ ನಷ್ಟ ಆಗುವ ಪ್ರಶ್ನೆ ಉದ್ಭವಿಸುವುದಿಲ್ಲ.

ಹೆಗ್ಗಡದೇವನಕೋಟೆ ತಾಲ್ಲುಕು ಒಳಗೊಂಡಂತೆ ಇರುವ ನಾಗರಹೊಳೆ ರಾಷ್ಟ್ರೀಯ ಉದ್ಯಾನ ವನದಲ್ಲಿ ಮರಗಳನ್ನು ತೆಗೆಯಲು ವನ್ಯಜೀವಿ ಕಾಯಿದೆ 1972ರ ಪ್ರಕಾರ ಅವಕಾಶವಿರುವುದಿಲ್ಲ. ಆದಾಗ್ಯೂ ಸಹಿತ ವನ್ಯ ಪ್ರಾಣಿಗಳ ವೀಕ್ಷಣೆಗೆ ಅನುಕೂಲವಾಗುವಂತೆ ಹಾಗೂ ವನ್ಯ ಪ್ರಾಣಿಗಳ ಹಿತ ದೃಷ್ಟಿಯಿಂದ ವೀಕ್ಷಣಾ ರೇಖೆಯಲ್ಲಿ ಬಿದ್ದಿರುವ ಕೆಲವು ಮರಗಳನ್ನು ಮಾತ್ರ ತೆಗೆಯಲಾಗಿದೆ. ಈ ಸಾಲಿನಲ್ಲಿ ಒಟ್ಟು 284 ಘನ ಮೀಟರ್ ಮರಗಳನ್ನು ಈ ರೀತಿ ತೆಗೆಯಲಾಗಿರುತ್ತದೆ. ಹಾಗೆ ತೆಗೆಯಲಾದ ಮರವನ್ನು ಹೆಸರಾಂತ ಡಿಪೋ ಆದ ಹುಣಸೂರು ಟಿಂಬರ್ ಡಿಪೋಗೆ ಸಾಗಿಸಿದ್ದು, ಇಲ್ಲಿಯವರೆಗೆ 256ಘನ ಮೀಟರ್ ಮರವನ್ನು ಸಾಗಾಣಿಕೆ ಮಾಡಲಾಗಿದೆ. ಹುಣಸೂರು ಡಿಪೋದಲ್ಲಿ ಹರಾಜು ಮಾಡಿದರೆ ಸರ್ಕಾರಕ್ಕೆ ಹೆಚ್ಚುವರಿ ಆದಾಯ ಬರುವುದೆಂಬ ದೃಷ್ಟಿಯಿಂದ ಈ ಕ್ರಮವನ್ನು ಇಲಾಖೆಯ ಅಧಿಕಾರಿಗಳು ತೆಗೆದುಕೊಂಡಿದ್ದು, ಇದರಿಂದ ಸರ್ಕಾರಕ್ಕೆ ಹೆಚ್ಚಿನ ಲಾಭವಾಗಿದೆಯೇ ಹೊರತು ಯಾವುದೇ ನಷ್ಟ ಆಗಿರುವುದಿಲ್ಲ. ಉಳಿದ ಸುಮಾರು 25 ಘನ ಮೀಟರ್ ಮರವನ್ನು ಎರೆಹಳ್ಳಿ ಟಿಂಬರ್ ಡಿಪೋಗೆ ಸಾಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಉಳಿದ ಅರಣ್ಯ ಪ್ರದೇಶಗಳಲ್ಲಿ ಮರ ತೆಗೆಯುವ ಕಾರ್ಯಕ್ರಮವಿದ್ದಂತೆ ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕಿಗೆ ಹೊಂದಿಕೊಂಡತೆ ಇರುವ ನಾಗರಹೊಳೆ ರಾಷ್ಟ್ರೀಯ ಉದ್ಯಾನ ವನದಿಂದ ಮರ ತೆಗೆಯುವ ಕಾರ್ಯಕ್ರಮವಿರುವುದಿಲ್ಲ. ಆದ್ದರಿಂದ ಯಾವುದೇ ತಾಲ್ಲೂಕಿನ ಜನರು ರಾಷ್ಟ್ರೀಯ ಉದ್ಯಾನವನವನ್ನು ಮರುಮುಟ್ಟುಗಳಿಗೆ ಅವಲಂಭಿಸಲಾಗುವುದಿಲ್ಲ ಈ ಹಿನ್ನೆಲೆಯಲ್ಲಿ ವೀಕ್ಷಣಾ ರೇಖೆಯನ್ನು ಉತ್ತಮಗೊಳಿಸುವ ಸಲುವಾಗಿ ತೆಗೆದಿರುವ ಅಲ್ಪ ಪ್ರಮಾಣದ ಮರವನ್ನು ಸರ್ಕಾರದ ಹಿತ ದೃಷ್ಟಿಯಿಂದ ಮಾತ್ರ ಹುಣಸೂರು ಟಿಂಬರ್ ಡಿಪೋಗೆ ಸಾಗಿಸಲಾಗಿರುತ್ತದೆ. ಎರೆಹಳ್ಳಿ ಡಿಪೋದಲ್ಲಿ ಇನ್ನೂ ಹೆಚ್ಚಿನ ಮರದ ಅವಶ್ಯಕತೆ ಇದ್ದಲ್ಲಿ ವೀಕ್ಷಣಾ ರೇಖೆಯಿಂದ ತೆಗೆಯಲಾಗುವ ಅಲ್ಪ ಪ್ರಮಾದ ಮರವನ್ನು ಎರೆಹಳ್ಳಿ ಡಿಪೋಗೆ ಸಾಗಿಸಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡಲಾಗುವುದು ಎರೆಹಳ್ಳಿ ಡಿಪೋದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿವರ್ಗದವರಿಗೆ ತಿಂಗಳಿಗೆ ಅಂದಾಜು 30 ರಿಂದ 35 ಸಾವರಿದವರೆಗೆ ವೆಚ್ಚವಾಗುತ್ತಿದೆ.

(ಈ) ಲಕ್ಕೇಶ್ವರದಲ್ಲಿ 30 ಹಾಸಿಗೆಯ ದವಾಖಾನೆಯಲ್ಲಿ ವೈದ್ಯಾಧಿಕಾರಿಗಳು, ಎಕ್ಸರೇ ಮಿಷನ್ ಮತ್ತು ದಾಯಿಗಳು ಇಲ್ಲದೆ ತೊಂದರೆ.

ಶ್ರೀ ಜಿ.ಎಂ. ಮಹಂತ ಶೆಟ್ಟರ್ (ಶಿರಹಟ್ಟಿ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ನನ್ನ ಶಿರಹಟ್ಟಿ ಕ್ಷೇತ್ರದ ಲಕ್ಕೇಶ್ವರದಲ್ಲಿ 30 ಹಾಸಿಗೆಗಳ ದವಾಖಾನೆಯಲ್ಲಿ ಐದಾರು ವರ್ಷವಾಗಿದೆ. ಐದಾರು ವರ್ಷಆದರೂ ಅಲ್ಲಿ ವೈದ್ಯಾಧಿಕಾರಿಗಳು ಇಲ್ಲ, ಎಕ್ಸರೇ ಮಿಷನ್ ಇರುವುದಿಲ್ಲ, ದಾಯಿಗಳು ಇರುವುದಿಲ್ಲ, ಇದನ್ನು ಯಾವಾಗ ಸರಿಪಡಿಸಲಾಗುವುದು?

ಶ್ರೀ ಎಂ.ಸಿ. ನಾಣಯ್ಯ (ವಾರ್ತ ಮತ್ತು ಪ್ರಸಾರ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಆಸ್ಪತ್ರೆ, ಲಕ್ಕೇಶ್ವರ ಇದು 30 ಹಾಸಿಗೆಗೆ ಮೇಲ್ದರ್ಜೆಗೇರಿಸಿರುತ್ತದೆ. ಇಲ್ಲಿ ಈ ಹಿಂದೆ 2 ವೈದ್ಯ ಹುದ್ದೆಗಳು ಮಂಜೂರಾಗಿದ್ದು, ಈ 2